ISSN : 2581-7728
Tumbe International e-Magazine
A Multilanguage Magazine
Issue-1
Volume-4
Jan-June: 2021

# ಕಾಣದ ಕಡಲಿಗೆ ಹಂಬಲಿಸಿದೆ ಈ ಮನ.....

**ನವೀನಕುಮಾರ ಗು. ತಿಪ್ಪಾ**

ಸಂಶೋಧನಾ ವಿದ್ಯಾರ್ಥಿ
ಸಮಾಜಕಾರ್ಯ ಅಧ್ಯಯನ ಹಾಗೂ ಸಂಶೋಧನಾ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 580003
+91 9663247006

ಈ ಜಗತ್ತೇ ಹೀಗೇ!., ಮನುಷ್ಯರನ್ನು ಜೀವನವೆಂಬ ಸ್ಪರ್ಧಾಕಣಕ್ಕೆ ತಂದು ನಿಲ್ಲಿಸಿ, ಹೊರಟೋಗುತ್ತದೆ. ಆದರೆ, ನಿಜವಾದ ಜೀವನದ ಅರ್ಥ ಮಾನವರಿಗೆ ಅರಿವಾಗುವುದರಲ್ಲಿ 'ಈ ಜೀವನ' ಮುಗಿದು ಹೋಗಿರುತ್ತದೆ. ಹೀಗೆ, ಪ್ರಾರಂಭವಾಗುವ ಜೀವನದ ಎಳೆಗೆ ಎಲ್ಲೇ ಇರಲು ಸಾಧ್ಯವೇ ಎನ್ನುವ ಆರಂಭಿಕತನದ ಭಾವನೆಗಳು, ಕಾಲ ಕ್ರಮೇಣ ಮಾಸಿ ಹೋಗಿ, 'ಎಲ್ಲದಕ್ಕೂ ಮಿತಿ'ಯಿದೆ ಎನ್ನುವ ನಿರ್ಧಾರವು ಮನೋ-ಸಾಮಾಜಿಕವಾಗಿ ಬೇರೂರಿಬಿಡುತ್ತದೆ. ಜೊತೆಗೆ ಚೌಕಟ್ಟುಗಳ ನಡುವೆ ಬಾಳುವ, ಜೀವಿಸುವ ಉಸಿರಾಡಿಸುವ ಮನೋ-ಪ್ರವೃತ್ತಿಯು ಕೊನೆಗೊಳ್ಳುವುದು ಕಾಣದೂರಿಗೆ ಪಯಣ ಬೆಳೆಸಿದಾಗ ! ನಿಜ, ಈ ಜೀವನ ಒಂದು ಅವಕಾಶ, ಅರ್ಥ ಮಾಡಿಕೊಳ್ಳಬೇಕು, ಬಳಸಿಕೊಳ್ಳಬೇಕು, ಉಪಯೋಗಿಸಿಕೊಳ್ಳಬೇಕು.

ಇನ್ನು ಜೀವನದಲ್ಲಿ ಆಸೆ-ಆಕಾಂಕ್ಷೆಗಳಿರುವುದು ಸಹಜ, ಆದರೆ ಅದರ ವ್ಯಾಪ್ತಿ ಹೆಚ್ಚಿಸಿದಷ್ಟು, ದುಗುಡ, ದುಮ್ಮಾನ, ಆತಂಕ, ದ್ವೇಷ, ನೋವು, ಜಿಗುಪ್ಸೆ, ಖಿನ್ನತೆ, ಮನೋ-ದೈಹಿಕವಾಗಿ ಕುಗ್ಗುವುದು, ಇವೆಲ್ಲವುಗಳು ಈ ಒಂದು ಅವಕಾಶವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ದಾರಿ ಬಿಡುವುದಿಲ್ಲ. ಅಂದ ಹಾಗೇ ಇವೆಲ್ಲವುಗಳಿಗೂ ಕಾರಣವಾದರೂ ಒಂದೇ ದುರಾಸೆ, "ಪರಿಸರ ಮಾನವನ ಆಸೆಗಳನ್ನು ಪೂರೈಸುತ್ತದೆ, ಆದರೆ ದುರಾಸೆಗಳನ್ನಲ್ಲ" ಎನ್ನುವ ಮಹಾತ್ಮಾ ಗಾಂಧೀಜಿಯವರ ಅಶರೀರವಾಣಿಯು ನಮ್ಮ ಕಿವಿಗೆ ಅಪ್ಪಳಿಸಿ, ನಮ್ಮ ದುರಾಸೆಯ ಮುಖವನ್ನು ಕಳಚಲು ಪ್ರಯತ್ನಿಸತೊಡಗುತ್ತದೆ. ಆದರೆ, ಈ ಬಣ್ಣದ ಬದುಕಿನ ಬಂಡಿಗೆ ಇಂತಹ ನೂರಾರು ಮುಖಗಳಿರುವುದು ಆಗ ಅರಿವಿಗೆ ಬರುತ್ತದೆ. ಹೀಗೆ ನಮ್ಮ ಮುಂದಿರುವ ಸುಂದರವಾದ, ಸ್ವಚ್ಛಂದವಾದ ಬದುಕನ್ನು ಬಿಟ್ಟು, ಬಣ್ಣಗಳಿಗೆ ಮರುಳಾಗಿ, ಹೊಸತನಕ್ಕೆ ಹೊಸಬರಾಗಿ ಅಳವಡಿಸಿಕೊಳ್ಳಲು ಹಾತೊರೆಯುವವರಾಗಿ ಕಾಣದ ಗುಂಡಿಗೆ ಬಿದ್ದು, ಮೇಲೆ ಬರಲಾರದಂತಹ ಸ್ಥಿತಿಯಲ್ಲಿ ಒದ್ದಾಡ್ತಾ, ವಾಸ್ತವತೆಯನ್ನು ನೆನೆಯಲು ಮತ್ತು ಅದರಂತೆ ಜೀವಿಸದಿದ್ದಕ್ಕೆ ಪರಿತಪಿಸತೊಡಗುತ್ತೇವೆ. ಅಂದರೆ, ವಾಸ್ತವಿಕತೆಯನ್ನು ಒಪ್ಪಿ, ನೈಜತೆಯಲ್ಲಿ ಜೀವಿಸಿದರೆ ತಾಪತ್ರಯದ ಗೋಜು ಇರುವುದಿಲ್ಲ. ಬದಲಾಗಿ ಬದಲಾಗುತ್ತಿರುವ ಸಮಾಜದ ಜೀವನ ಪದ್ಧತಿಗೆ ತಲೆದೂಗುತ್ತಾ ಹೋದಂತೆ ಮುಂದೊಂದು ದಿನ ಅದು ಅಧೋಗತಿಗೆ ತಂದು ನಿಲ್ಲಿಸೋಕ್ಕೆ ಹಿಂದೇಟು ಹಾಕಲು ಮೀನಮೇಷ ಎನಿಸುವುದಿಲ್ಲ. ಹೀಗೆ, ಮನುಷ್ಯ ಕಾಣುವ ಜೀವಿಗಳ ಪ್ರೀತಿಯ ನೆಲೆಯನ್ನು ಬಿಟ್ಟು ಕಾಣದಿರುವ ನೆಲೆಗೆ ಯಾವಾಗಲೂ ಹಾತೊರೆಯುತ್ತಿರುತ್ತಾನೆ. "ಕಾಣದ ಕಡಲಿಗೆ ಹಂಬಲಿಸಿದೆ ಈ ಮನ" ಎಂಬಂತೆ., ಅದುವೇ ಅವನ ನಿರಂತರವಾದ ಅನ್ವೇಷಣೆ, ಈ ಅನ್ವೇಷಣೆ ಎಂಬ ಪಯಣದಲ್ಲಿ ಮನುಷ್ಯ ಸಾಕಷ್ಟು ದೂರ ಸಾಗುತ್ತಲಿದ್ದಾನೆ. ಯಾಕೆಂದರೆ, "ವಸ್ತುಗಳನ್ನು ಉಪಯೋಗಿಸುವ ಭರದಲ್ಲಿ ಅವುಗಳನ್ನು ಪ್ರೀತಿಯಿಂದ ಸಂರಕ್ಷಿಸಿಡುವ ಪ್ರವೃತ್ತಿಯು", ಹಾಗೇ "ಮನುಷ್ಯನನ್ನೇ ಪ್ರೀತಿಸುವ ಭರದಲ್ಲಿ ಅವರನ್ನು ಉಪಯೋಗಿಸುವಂತಹ" ಆಘಾತಕಾರಿಯಾದಂತಹ ಚಿತ್ರಣವು ಇಂದು ನಮ್ಮ ಕಣ್ಣೆದುರಿಗೆ ಗೋಚರಿಸುತ್ತಲಿದೆ. ಇಂತಹ ನೈತಿಕ ಮೌಲ್ಯಗಳಲ್ಲಿನ ಮಾರ್ಪಾಡುಗಳಿಂದ, ಇಂದು ಸತ್ವಯುತ ಮೌಲ್ಯಗಳಿಂದ ಕೂಡಿದ ಮನುಷ್ಯರನ್ನು "ಹಗಲಲ್ಲಿ ಬೆಳಕನ್ನು ಹಾಕಿ ಹುಡುಕಬೇಕಾದ ಸಂದರ್ಭ ಬಂದೋಗಿದೆ". ಈ ಎಲ್ಲ ಬೆಳವಣಿಗೆಯಲ್ಲಿ ಮನುಷ್ಯ

‘ತನ್ನ’ ತನವನ್ನು ಕಳೆದುಕೊಂಡು ಸ್ಥಿರತೆಗಾಗಿ, ಮನ:ಶಾಂತಿಗಾಗಿ ಹಾತೊರೆದು, ಪುನ: ಸಾಮಾಜಿಕ, ಧಾರ್ಮಿಕ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾಗಿ, ಆಧ್ಯಾತ್ಮಿಕತೆಯಲ್ಲಿ ಮುಳುಗಿ ಲೌಕಿಕ ಪ್ರಪಂಚದ ನೆನಪುಗಳನ್ನು ಮರೆಯಲು ಪ್ರಯತ್ನ ಪಡುತ್ತಲಿದ್ದಾನೆ. ತಂತ್ರಜ್ಞಾನ ಯುಗದಲ್ಲಿ ಎಲ್ಲವೂ ಆಧುನೀಕರಣಗೊಳ್ಳುತ್ತಿರುವದರಿಂದ ಮನುಷ್ಯನು ನಿಯಮಿತವಾಗಿ ಅದರ ಜೊತೆಯಲ್ಲಿಯೇ ಜೀವನ ಸಾಗಿಸುತ್ತಿದ್ದಾನೆ.

ಅನ್ವೇಷಣೆಯ ಈ ಹಾದಿಯಲಿ ಮನುಷ್ಯ ಕಾಣದ ಜೇಡರ ಬಲೆಯೊಳಗೆ ಸಿಕ್ಕು, ಸಾಮರ್ಥ್ಯವಿದ್ದು, ಹೊರಬರಲು ಅಸಮರ್ಥರಾಗುತ್ತಿದ್ದಾನೆ. ಕಾರಣ ತನ್ನಲ್ಲಿನ ಶಕ್ತಿಯ ಪರಿವೇ ಇಲ್ಲದಿರುವುದು. ಹಾಗೇ ನಮ್ಮ ಕಣ್ಣು ಮುಂದಿರುವ, ಹಿರಿಯರಿಂದ ಬಳುವಳಿಯಾಗಿ ಬಂದಿರುವ ಆಚಾರ, ವಿಚಾರ, ಸಂಪ್ರದಾಯ, ಪದ್ಧತಿ, ಸಂಸ್ಕೃತಿಯನ್ನು ಬಿಟ್ಟು, ಯಾಂತ್ರಿಕ ಪ್ರಪಂಚದ ಕಡೆಗೆ ಮಾನವ ಸಾಗುತ್ತಲಿದ್ದಾನೆ. ಹೀಗೆ, ಈ ಜೀವನ ಮತ್ತು ಮನಸ್ಸುಗಳ ನಡುವೆ ಸಮತೋಲನ ಸಾಧಿಸುವಲ್ಲಿ ನಿತ್ಯನಿರಂತರ ಪ್ರಯತ್ನಗಳು ನಡೆದಿವೆ, ನಡೆಯುತ್ತವೆ, ಮತ್ತು ನಡೆಯುತ್ತಲಿಯೆಂಬ ಪರಿಕಲ್ಪನೆಯು ಹೊಸ ದಾರಿ ಹುಡುಕಲು, ಪ್ರಾರಂಭಿಕತೆಯಿಂದ ಆರಂಭಿಸಲು ನೆರವಾಗುತ್ತದೆ ಎಂದು ಹೇಳಿದರೆ ಅತಿಯೋಶಕ್ತಿ ಎನಿಸಲಾರದು.